ಅರ್ಥವಾಗಿರಲಿಲ್ಲ.

"ಅಣ್ಣಾವ್ರು ವಿಚಾರಿಸಿಕೊಳ್ಳಲು ಹೇಳಿದ್ರು..." ನಾಯರ್ ಈಗ ಸ್ವಲ್ಪ ಗಟ್ಟಿಯಾಗಿ ಹೇಳುತ್ತಿರುವಾಗಲೇ ನರಸಿಂಹರೆಡ್ಡಿಯವರು ರೆಸ್ಟ್‌ರೂಮಿನಿಂದ ಹೊರಗೆ ಬಂದಿದ್ದರು.

"ಜಗತ್ತಿನಲ್ಲಿ **ultimate** ಸುಖ ಎಂದರೆ ಅದು ಹೆಣ್ಣು ಮತ್ತು ಗಂಡು ದೇಹಗಳು ಪರಸ್ಪರ ಸಂಘರ್ಷದಿಂದ ಪಡೆಯುವ ಸುಖ ಎಂಬುದು ಸಾಬೀತಾಗಿದೆ. ನಮ್ಮ ಕರುಣನಿಗೆ ಕೆಲವು ಅಪ್ಸರೆಯಂಥ ಮೀನಾಕ್ಷಿಯರ ಕಾಂಟ್ಯಾಕ್ಟ್ ಇದೆ. ಪಾಪ, ಅವರದೂ ಒಂದು ಬದುಕು. ನೀವು ಮುಂಬಯಿಗೆ ಹೋದರೆ ನಾಗ್ಪಾಡ್ ಎಂಬ ರೆಡ್ ಲೈಟ್ ಏರಿಯಾಗೆ ಹೋಗಿ ಬನ್ನಿ. ಹೆಣ್ಣನ್ನು ಕೊಳೆತ ತರಕಾರಿಗಿಂತಲೂ ಅದ್ವಾನವಾಗಿ ಟ್ರೀಟ್ ಮಾಡುತ್ತಾರೆ. ನಿಜಕ್ಕೂ ಹೆಣ್ಣು ದೇವರ ಅದ್ಭುತ ಸೃಷ್ಟಿ. ಆದರೆ ತೃಪ್ತಿಯ ನಂತರ ಹೆಣ್ಣು ಗಂಡಸಿಗೆ ಅಸಹ್ಯವಾಗಿಬಿಡುವುದು ಜೀವಕೋಟಿಯ ಒಂದು ಕೆಟ್ಟ ಸಂಗತಿ. ಸೃಷ್ಟಿ ದೋಷವನ್ನು ಸರಿಪಡಿಸಲು ಮನುಷ್ಯ ಮಾತ್ರನಿಂದ ಯಾವೊತ್ತೂ ಸಾಧ್ಯವಾಗದ ಮಾತು. ನಮಗೆ ಲೆಕ್ಕವಿಲ್ಲದಷ್ಟು ಆಸ್ತಿ, ಸಂಪತ್ತು ಇರಬಹುದು. ಆದರೆ ದೇಹ ಮನಸ್ಸುಗಳಿಗೆ ತೃಪ್ತಿ, ಖುಷಿ ಕೊಡದ ಯಾವುದೂ ಸಂಪತ್ತು ಅನ್ನಿಸಲಾರದು. ಆದ್ದರಿಂದಲೇ ಅನುಭವಿಸಲಾಗದ ಸಂಪತ್ತನ್ನು ಎಷ್ಟು ಇಟ್ಟುಕೊಂಡಿದ್ದರೂ ಇಟ್ಟುಕೊಂಡವನು ದರಿದ್ರನೇ ಆಗಿರುತ್ತಾನೆ.'' ನರಸಿಂಹರೆಡ್ಡಿ ಕೈಯನ್ನು ಟವಲ್ಲಿನಿಂದ ಒರೆಸಿಕೊಳ್ಳುತ್ತಾ ನನ್ನ ಕಡೆ ನೋಡುತ್ತಾ ನಕ್ಕಿದ್ದರು. ಈಗ ಕರುಣಾಕರ ನಾಯರನ ಮಾತುಗಳ ಅರ್ಥ ಬಿಚ್ಚಿಕೊಂಡಿದ್ದವು. ನಾನು ನಿಜವಾಗಿಯೂ ಗೊಂದಲದಲ್ಲಿ ಬಿದ್ದಿದ್ದೆ.

"ತೃಪ್ತಿಯ ನಂತರ ಹೆಣ್ಣು ಗಂಡಿಗೂ, ಗಂಡು ಹೆಣ್ಣಿಗೂ ಅಸಹ್ಯವಾಗದೇ ಇದ್ದ ಪಕ್ಷದಲ್ಲಿ ಲೈಂಗಿಕ ಕ್ರೌರ್ಯ, ಲೈಂಗಿಕ ಅಪರಾಧ, ಸೋಷಿಯಲ್ ಡಿಸಾರ್ಡರ್ ಮುಂತಾದ ಸಮಸ್ಯೆಗಳು ತೀರಾ ಸಾಮಾನ್ಯವಾಗಿಬಿಡುತ್ತಿದ್ದವು. ಆದ್ದರಿಂದಲೇ ಸೃಷ್ಟಿಯ ಬಯೊಲಾಜಿಕಲ್ ಸಿದ್ಧಾಂತಗಳು ಯಾವಾಗಲೂ ತಮ್ಮಲ್ಲಿ ತಾವೇ ಸಮತೋಲಗಳನ್ನು, ಅಪೂರ್ವ ಸಾಂದ್ರತೆಗಳನ್ನು ಭದ್ರವಾಗಿ ಮೈಗೂಡಿಸಿಕೊಂಡಿರುತ್ತವೆ..." ಸೈಕಾಲಜಿಯಲ್ಲಿ ಯಾವೊತ್ತೋ ಓದಿದ್ದು ಥಟ್ಟನೆ ನೆನಪಾಗಿ ಹೇಳಿದ್ದೆ.

"ಬಲವಂತವೇನೂ ಇಲ್ಲ. ಮನುಷ್ಯನನ್ನು ಸೇರಿಸಿಕೊಂಡು ಜೀವಜಗತ್ತಿನ ಯಾವ ಪ್ರಾಣಿಯೂ ಬಲವಂತವಾಗಿ ಸುಖವನ್ನು ಅನುಭವಿಸಲಾರದು. ನಾನಂತೂ ಈ ಐದು ವರ್ಷಗಳ ಹಿಂದಿನವರೆಗೂ ಅಂಥ ಅದ್ಭುತ ಸುಖವನ್ನು ಅನುಭವಿಸಿದ್ದೇನೆ. ಮನುಷ್ಯನ ಡೆಸ್ಟಿನಿ ಸುಖ ಇರಬಹುದೇ? ಹಸಿವು, ಕಾಮ ಮತ್ತು ಸಾವಿನ ಸಂದರ್ಭಗಳಲ್ಲಿ ಮನುಷ್ಯ ಅತ್ಯಂತ ಸ್ವಾರ್ಥಿಯಾಗಿ ವರ್ತಿಸುತ್ತಾನೆ. ಇಟ್ಸ್ ಆಲ್‌ರೈಟ್, ನಾಳೆ ಬೆಳಿಗ್ಗೆ ಆರೂವರೆ ಗಂಟೆಗೆ ರೆಡಿಯಾಗಿಬಿಡಿ. ತಿಂಡಿ ಏರ್‌ಪೋರ್ಟ್‌ನಲ್ಲೆ ತಿಂದ್ರಾಯ್ತು. ಗುಡ್ ನೈಟ್..." ಎಂದು ನರಸಿಂಹರೆಡ್ಡಿ ಕೈ ಕುಲುಕಿದ್ದರು. ಆತನ ಮುಷ್ಟಿ ಇಳಿವಯಸ್ಸಿನಲ್ಲೂ ಅತ್ಯಂತ ಬಲಿಷ್ಠವಾಗಿತ್ತು.

ನನ್ನ ರೂಮಿಗೆ ಹಿಂತಿರುಗಿ ಮಲಗಿದರೂ ಬಹಳ ಹೊತ್ತು ನಿದ್ದೆ ಹತ್ತಿರಲಿಲ್ಲ. ದೇಹ ಮತ್ತು ಮನಸ್ಸುಗಳೆರಡೂ ಅತಂತ್ರದಿಂದ ಪತರಗುಟ್ಟತೊಡಗಿದ್ದವು. ಒಮ್ಮೆ ನರಸಿಂಹರೆಡ್ಡಿಯವರ ಆಹ್ವಾನ ತಿರಸ್ಕರಿಸಿದ್ದು ಸರಿಯೆನಿಸಿದರೂ, ತಿರಸ್ಕರಿಸಿ ತಪ್ಪು ಮಾಡಿದೆನೇನೋ ಅನ್ನಿಸಿತ್ತು ಮತ್ತೊಮ್ಮೆ. ಬಹುಶಃ ಪ್ರತಿಯೊಬ್ಬ ಮನುಷ್ಯನೂ ಅನೇಕ ಸಂದರ್ಭಗಳಲ್ಲಿ ಇಂಥ ಗೊಂದಲಗಳಲ್ಲಿ ಬಿದ್ದು ಸುಖದ ಕ್ಷಣಗಳನ್ನು ವೃಥಾ ವ್ಯರ್ಥಮಾಡಿಕೊಳ್ಳುತ್ತಾನೆ. ನಾನು ನರಸಿಂಹರೆಡ್ಡಿಯನ್ನು ಕಾಣಲು ಬಂದ ಕಾರಣದ ಹಿಂದೆ ಸ್ವಾರ್ಥದ ಉದ್ದೇಶವೂ ಇತ್ತು. ನನ್ನ ಮಗ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು ಬೆಂಗಳೂರಿನಲ್ಲಿ ಒಂದು ಸ್ವಂತ ಸಾಫ್ಟ್‌ವೇರ್ ಕಂಪನಿಯನ್ನು ಪ್ರಾರಂಭಿಸಲು ಪ್ಲಾನ್ ಮಾಡುತ್ತಿದ್ದ. ನರಸಿಂಹರೆಡ್ಡಿಯವರದು ಬೆಂಗಳೂರಿನ ಪ್ರೈಮ್ ಪ್ಲೇಸ್‌ನಲ್ಲಿ ಅರ್ಧ ಎಕರೆ ಜಮೀನು